ಕರ್ನಾಟಕ ಸರ್ಕಾರ
ಮಕ್ಕಳ ರಕ್ಷಣಾ ನಿರ್ದೇಶನಾಲಯ
3 ನೇ ಮಹಡಿ, ವಿಶ್ವೇಶ್ವರಯ್ಯ ಚಿಕ್ಕಗೋಪುರ, ಡಾ॥ ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು-560001.
e-mail ID: icps.kar@gmail.com Ph.No.080-22879381/8

ಸಂ:ಮರನಿ/ಮರ/ಪೋಕ್ಸೋ.ಪ್ರ-33/2022-23 ದಿನಾಂಕ:17.10.2022

ಆಯುಕ್ತರು
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ,
ನಂ.17, ವಾರ್ತಾಸೌಧ, ಭಗವಾನ್ ಮಹಾವೀರ ರಸ್ತೆ,
ಬೆಂಗಳೂರು.

ಮಾನ್ಯರೇ,

**ವಿಷಯ:** ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನ ಅಪ್ರಾಪ್ತ ಬಾಲಕಿಯ ಮೇಲೆ ನಡೆದ ಲೈಂಗಿಕ ದೌರ್ಜನ್ಯ ಕುರಿತು ಸಾಮಾಜಿಕ ಜಾಲತಾಣಗಳಲ್ಲಿ ವರದಿಯಾಗಿರುವ ಕುರಿತು.

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ತಿದ್ದುಪಡಿ ಕಾಯ್ದೆ 2021 ಹಾಗೂ ತಿದ್ದುಪಡಿ ಮಾದರಿ ನಿಯಮಗಳು 2022 ಅನುಷ್ಠಾನಗೊಳಿಸಲು ಪ್ರತ್ಯೇಕವಾಗಿ ಸಮಗ್ರ ಮಕ್ಕಳ ರಕ್ಷಣಾ ನಿರ್ದೇಶನಾಲಯವನ್ನೆ ಪ್ರಾರಂಭಿಸಲಾಗಿರುತ್ತದೆ, ಮಕ್ಕಳ ರಕ್ಷಣಾ ನಿರ್ದೇಶನಾಲಯದಡಿ ಸಮಗ್ರ ಮಕ್ಕಳ ರಕ್ಷಣಾ ಯೋಜನೆಯು ಕಾರ್ಯ ನಿರ್ವಹಿಸುತ್ತಿದೆ. ಇದು ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು, ಪಾಲನೆ ಮತ್ತು ರಕ್ಷಣೆ ಅವಶ್ಯವಿರುವ, ಕಾನೂನು ಸಂಘರ್ಷಕ್ಕೆ ಒಳಪಟ್ಟ ಹಾಗೂ ನಿರ್ಲಕ್ಷ್ಯತೆಗೊಳಗಾದ, ಪರಿತ್ಯಜಿಸಲ್ಪಟ್ಟ, ಒಪ್ಪಿಸಲ್ಪಟ್ಟ, ದೌರ್ಜನ್ಯಕ್ಕೆ ಒಳಗಾದ, ಶೋಷಣೆಗೆ ಒಳಗಾದ ಮತ್ತು ಕುಟುಂಬದಿಂದ ಬೇರ್ಪಟ್ಟ ಮಕ್ಕಳು ದುರ್ಬಲ ಸ್ಥಿತಿ ತಲುಪದಿರುವಂತೆ ತಡೆಯಲು ಹಾಗೂ ಇಂತಹ ಪ್ರಕರಣಗಳನ್ನು ಕಡಿಮೆ ಮಾಡಲು ಮತ್ತು ಸಂಕಷ್ಟದಲ್ಲಿರುವ ಮಕ್ಕಳ ಪರಿಸ್ಥಿತಿಯನ್ನು ಉತ್ತಮ ಪಡಿಸುವ ಉದ್ದೇಶವನ್ನು ಹೊಂದಿರುತ್ತದೆ.

ಪ್ರಸ್ತುತ ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನಲ್ಲಿ ಬಾಲಕಿ ಮೇಲೆ ನಡೆದ ಲೈಂಗಿಕ ದೌರ್ಜನ್ಯ ಪ್ರಕರಣವನ್ನು ಸಾಮಾಜಿಕ ಜಾಲತಾಣ ಹಾಗೂ ದಿನ ಪತ್ರಿಕೆಗಳಲ್ಲಿ "ಮಳವಳ್ಳಿ-ಅತ್ಯಾಚಾರ ಮತ್ತು ಕೊಲೆ", "ಹಲಗೂರು:ಬಾಲಕಿ ಮೇಲೆ ಅತ್ಯಾಚಾರ", "ಮಳವಳ್ಳಿ ಬಾಲಕಿ ಅತ್ಯಾಚಾರ, ಕೊಲೆ ಪ್ರಕರಣ: ಪೋಕ್ಸೋ ಕಾಯ್ದೆಯಡಿ ಪ್ರಕರಣ ದಾಖಲು", ಮತ್ತು "ಬಾಲಕಿ ಮೇಲೆ ಅತ್ಯಾಚಾರ ದೃಢಪಡಿಸಿದ ವರದಿ" ಶೀರ್ಷಿಕೆಯಡಿ ಪ್ರಕಟವಾಗಿರುವುದಲ್ಲದೆ ಬಾಲಕಿಯ ಹೆಸರು ಮತ್ತು ಭಾವ ಚಿತ್ರವನ್ನು ಸಹಾ ಪ್ರಕಟಿಸಲಾಗಿರುತ್ತದೆ.

ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ತಿದ್ದುಪಡಿ ಕಾಯ್ದೆ 2021 ರ ಕಲಂ 74 ರಲ್ಲಿ ಮಕ್ಕಳ ಮಾಹಿತಿಯನ್ನು ಹಾಗೂ ಭಾವ ಚಿತ್ರವನ್ನು ಬಹಿರಂಗ ಪಡಿಸುವುದು ಶಿಕ್ಷಾರ್ಹ ಅಪರಾಧವಾಗಿರುತ್ತದೆ. ಅಲ್ಲದೇ ತಿದ್ದುಪಡಿ ಕಾಯ್ದೆಯ ಕಲಂ 75 ರಲ್ಲಿ ಮಕ್ಕಳ ಮಾಹಿತಿಯನ್ನು ಬಹಿರಂಗ ಪಡಿಸಿದ್ದಲ್ಲಿ ಶಿಕ್ಷೆಗೆ ಒಳಪಡಿಸುವ ಹಾಗೂ ಲೈಂಗಿಕ ಅಪರಾಧಗಳಿಂದ ಮಕ್ಕಳ ಸಂರಕ್ಷಣಾ ಅಧಿನಿಯಮ 2012 ಕಲಂ 23(2) ರಲ್ಲಿಯೂ ಸಹಾ ಮಕ್ಕಳ ಗುರುತನ್ನು ಬಹಿರಂಗ ಪಡಿಸುವುದನ್ನು ನಿಷೇಧಿಸಿದೆ. (ಪ್ರತಿ ಲಗತ್ತಿಸಿದೆ).

ಮುಂದುವರೆದಂತೆ ಲೈಂಗಿಕ ಅಪರಾಧಗಳಿಂದ ಮಕ್ಕಳ ಸಂರಕ್ಷಣಾ ಅಧಿನಿಯಮ 2012ರಲ್ಲಿ ಅತ್ಯಾಚಾರ ಎಂಬ ಶಬ್ಧದ ಬಳಕೆ ಇರುವುದಿಲ್ಲ ಈ ಪದವು ಘೋರ ಪದವಾಗಿದ್ದು, ಅಧಿನಿಯಮದಲ್ಲಿಯೇ ಲೈಂಗಿಕ ಅಪರಾಧ

ಎಂಬ ಪದವನ್ನು ಉಪಯೋಗಿಸಲಾಗಿದೆ. ಸದರಿ ಮಾಹಿತಿಯನ್ನು ತಮ್ಮ ಆದ್ಯ ಗಮನಕ್ಕೆ ಸಲ್ಲಿಸುತ್ತಾ, ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ನಡೆದ ಸಂದರ್ಭಗಳಲ್ಲಿ ಮಕ್ಕಳಿಗೆ ಸಲ್ಲದ ಶಬ್ಧಗಳನ್ನು ಬಳಸದಂತೆ ಹಾಗೂ ಮಕ್ಕಳ ಹೆಸರು, ಭಾವಚಿತ್ರಗಳನ್ನು ಪ್ರಕಟಿಸದಂತೆ ಹಾಗೂ ಮಕ್ಕಳ ಗುರುತುಗಳನ್ನು ತಿಳಿಸುವ ಯಾವುದೇ ವಿವರಗಳನ್ನು ಪ್ರಕಟಿಸದಂತೆ ಎಲ್ಲಾ ಮಾಧ್ಯಮ ಮಿತ್ರರಿಗೆ ಸೂಕ್ತ ನಿರ್ದೇಶನವನ್ನು ನೀಡುವಂತೆ ಈ ಮೂಲಕ ಕೋರಿದೆ.

ತಮ್ಮ ವಿಶ್ವಾಸಿ,

ನಿರ್ದೇಶಕರು,
ಮಕ್ಕಳ ರಕ್ಷಣಾ ನಿರ್ದೇಶನಾಲಯ,
ಬೆಂಗಳೂರು.

ಪ್ರತಿಯನ್ನು:

1. ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಬೆಂಗಳೂರು ಹಾಗೂ ಸಂಚಾಲಕರು, ಬಾಲನ್ಯಾಯ ಸಮಿತಿ ಮಾನ್ಯ ಉಚ್ಛನ್ಯಾಯಾಲಯ ಬೆಂಗಳೂರು.

4. ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯಿದೆ–2015ರ, ಪ್ರಕಾರ **'ಬಾಲಾಪರಾಧಿ'** ಶಬ್ದ ಬಳಕೆ ಇಲ್ಲ ಬದಲಾಗಿ **'ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳು'** ಎಂದು ಬಳಸಬೇಕು ಹಾಗೂ **'ರಿಮಾಂಡ್ ಹೋಮ್'** ಶಬ್ದ ಬಳಕೆ ಇಲ್ಲ ಬದಲಾಗಿ **'ವೀಕ್ಷಣಾಲಯ' (Observaion Home)** ಎಂದು ಬಳಸುವುದು. ಆದ್ದರಿಂದ ಮಾಧ್ಯಮಗಳು **'ಬಾಲಾಪರಾಧಿ'** ಮತ್ತು **'ರಿಮಾಂಡ್ ಹೋಮ್'** ಎಂಬ ಶಬ್ದಗಳನ್ನು ಇನ್ಮುಂದೆ ಬಳಸುವಂತಿಲ್ಲ. ಬದಲಾಗಿ **'ಕಾನೂನಿನೊಂದಿಗೆ ಸಂಘರ್ಷದಲ್ಲಿರುವ'** ಮಕ್ಕಳು ಮತ್ತು **'ವೀಕ್ಷಣಾಲಯ'** ಎಂದು ಬಳಸುವುದು.

5. ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯಿದೆ–2015 ಕಲಂ 74ರ ಪ್ರಕಾರ, ಕಾನೂನಿನೊಂದಿಗೆ ಸಂಘರ್ಷದಲ್ಲಿರುವ (ಮಕ್ಕಳು ತಪ್ಪು ಅಥವಾ ಅಪರಾಧ ಮಾಡಿದ್ದಾರೆನ್ನುವ ಆರೋಪದ ಪ್ರಕರಣಗಳಲ್ಲಿ) ಅಥವಾ ಕಾಯ್ದೆಯಡಿ ಪೋಷಣೆ ಮತ್ತು ರಕ್ಷಣೆ ಹಾಗೂ ಸೇವೆಯ ಅಗತ್ಯವಿರುವಂತಹ ಪ್ರಕರಣವನ್ನು ಎದುರಿಸುತ್ತಿರುವ ಮಗುವಿನ ಹೆಸರು ಮತ್ತು ಮಗುವಿನ ಗುರುತು ಹಿಡಿಯಬಹುದಾದ ಯಾವುದೇ ವಿವರಗಳನ್ನು ಪ್ರಕಟಿಸುವುದನ್ನು ನಿಷೇಧಿಸಲಾಗಿದೆ. ಉಲ್ಲಂಘಿಸಿದಲ್ಲಿ 6 ತಿಂಗಳವರೆಗೆ ಶಿಕ್ಷೆ ಮತ್ತು 2 ಲಕ್ಷದವರೆಗೆ ದಂಡ.

6. ಯಾವುದೇ ದಿನಪತ್ರಿಕೆ, ಮ್ಯಾಗಜೀನ್, ಅಥವಾ ದೃಶ್ಯ ಮಾಧ್ಯಮದಲ್ಲಿ ಕಾನೂನು ಕಟ್ಟಳೆಯನ್ನು ಎದುರಿಸುತ್ತಿರುವ ಅಥವಾ ಪೋಷಣೆ, ರಕ್ಷಣೆ ಹಾಗೂ ಸೇವೆಯ ಅಗತ್ಯವಿರುವ ಮಗುವಿನ ವಿಚಾರಣೆಗೆ ಸಂಬಂಧಿಸಿದ ವರದಿಯಲ್ಲಿ ಮಗುವಿನ ಯಾವುದೇ ಗುರುತು ಬಹಿರಂಗ ಪಡಿಸುವಂತಿಲ್ಲ ಹಾಗೂ ಮಗುವಿನ ಭಾವಚಿತ್ರಗಳನ್ನು ಪ್ರಕಟಿಸುವಂತಿಲ್ಲ. ಈ ಸೆಕ್ಷನ್‌ನನ್ನು ಉಲ್ಲಂಘಿಸುವ ಯಾವುದೇ ವ್ಯಕ್ತಿಗೆ 6 ತಿಂಗಳವರೆಗೆ ಶಿಕ್ಷೆ ಮತ್ತು 2 ಲಕ್ಷದವರೆಗೆ ದಂಡ.

7. ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣಾ ಕಾಯ್ದೆ–2012 (ಪಾಕ್ಸೋ ಕಾಯ್ದೆ (POCSO-2012), ಮಕ್ಕಳ ಖಾಸಗಿತನದ ಹಕ್ಕನ್ನು ಹಾಗೂ ಲೈಂಗಿಕ ನಿಂದನೆಗೆ ಒಳಗಾದಂತಹ ಮಗುವಿನ ಗೌಪ್ಯತೆಯನ್ನು ರಕ್ಷಿಸುವಂತೆ ಹಾಗೂ ಮಗು ಹೆಚ್ಚು ಮಾನಸಿಕ ಹಿಂಸೆಗೆ ಒಳಗಾಗುವುದನ್ನು ತಡೆಗಟ್ಟುವಂತೆ ಮಾಧ್ಯಮಗಳನ್ನು ಕೋರುತ್ತದೆ. ಪಾಕ್ಸೋ ಕಾಯ್ದೆಯ ಕಲಂ 23 (2) ರ ಪ್ರಕಾರ ಅಂತಹ ಮಕ್ಕಳ ಗುರುತನ್ನು ಬಹಿರಂಗಪಡಿಸುವುದು ಅಥವಾ ಅಪೂರ್ಣ/ ಅನಧಿಕೃತ ಸುದ್ದಿ,

ವರದಿಗಾರಿಕೆ, ಬರವಣಿಗೆ ಅಥವಾ ಚಿತ್ರಗಳ ಪ್ರಕಟಣೆಯನ್ನು ನಿಷೇಧಿಸುತ್ತದೆ. **"ಯಾವುದೇ ಮಾಧ್ಯಮಗಳು ಮಗುವಿನ, ಹೆಸರು, ವಿಳಾಸ, ಭಾವಚಿತ್ರ, ಕೌಟುಂಬಿಕ ವಿವರ, ಶಾಲೆ, ನೆರೆಹೊರೆ ಅಥವಾ ಮಗುವಿನ ಗುರುತನ್ನು ಬಹಿರಂಗಪಡಿಸುವ ಇನ್ನ್ಯಾವುದೇ ವಿವರಗಳನ್ನು ತಮ್ಮ ವರದಿಯಲ್ಲಿ ಪ್ರಕಟಿಸಿ ಮಗುವಿನ ಗುರುತನ್ನು ಬಹಿರಂಗಗೊಳಿಸುವಂತಿಲ್ಲ".**

8. ಮಾಧ್ಯಮದ ಅಥವಾ ಸ್ಟುಡಿಯೋ ಅಥವಾ ಛಾಯಾಚಿತ್ರ ವ್ಯವಸ್ಥೆಯಿರುವ ಪ್ರಕಾಶಕರು ಅಥವಾ ಮಾಲೀಕರು ತಮ್ಮ ಸಿಬ್ಬಂದಿ ನಡೆಸುವ ಕೃತ್ಯಗಳಿಗೆ ಮತ್ತು ಮುಚ್ಚಿಡುವ ಪ್ರಯತ್ನಗಳಿಗೆ ಜಂಟಿಯಾಗಿ ಮತ್ತು ಗುರುತರವಾಗಿ ಹೊಣೆಗಾರರಾಗುತ್ತಾರೆ. **(ಪಾಕ್ಸೋಕಾಯ್ದೆ 2012 ಕಲಂ 23(3)**
9. ಯಾವುದೇ ವ್ಯಕ್ತಿ ಮೇಲಿನ ಅಂಶಗಳನ್ನು ಉಲ್ಲಂಘಿಸಿದರೆ ಕನಿಷ್ಟ ಆರು ತಿಂಗಳಿಂದ ಒಂದು ವರ್ಷದವರೆಗೂ ವಿಸ್ತರಿಸಬಹುದಾದ ಕಾರಾಗೃಹ ಶಿಕ್ಷೆ ಅಥವಾ ದಂಡ ಅಥವಾ ಎರಡನ್ನೂ ವಿಧಿಸಬಹುದು. [ಕಲಂ 23(4)] ನಿರ್ದಿಷ್ಟವಾದ ಸಂದರ್ಭಗಳಲ್ಲಿ ಮಗುವಿನ ಹಿತಾಸಕ್ತಿಗಾಗಿ ಮಾತ್ರ ವಿಶೇಷ ನ್ಯಾಯಾಲಯಗಳು ಕೆಲವೊಮ್ಮೆ ಇಂತಹ ಮಗುವಿನ ಗುರುತನ್ನು ಬಹಿರಂಗಪಡಿಸಲು ಅನುಮತಿ ನೀಡುತ್ತದೆ.
10. ಪಾಕ್ಸೋ ಕಾಯ್ದೆಯ ಪ್ರಕಾರ ಪೊಲೀಸರೂ ಸಹ ಮಕ್ಕಳ ಗುರುತನ್ನು ಬಹಿರಂಗಪಡಿಸುವಂತಿಲ್ಲ. ಕಾಯ್ದೆಯ ಕಲಂ 24 (5)ರ ಪ್ರಕಾರ ಪೊಲೀಸರು ಈ ಕಾಯ್ದೆಯಡಿ ಬರುವ ಮಗುವಿನ ಗುರುತನ್ನು ರಕ್ಷಿಸಬೇಕು. ಮಗುವಿನ ಹಿತಾಸಕ್ತಿಗಾಗಿ ವಿಶೇಷ ನ್ಯಾಯಾಲಯದ ನಿರ್ದೇಶನದ ಹೊರತು ಪೊಲೀಸರೂ ಸಹ ಮಗುವಿನ ಗುರುತು ಅಥವಾ ಪರಿಚಯವನ್ನು ಸಾರ್ವಜನಿಕವಾಗಿ ಬಹಿರಂಗಪಡಿಸುವಂತಿಲ್ಲ.
11. ಕಲಂ 43 (a) ರ ಪ್ರಕಾರ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು, ಮಕ್ಕಳು, ಪೋಷಕರು/ಪಾಲಕರು, ಇತ್ಯಾದಿಯವರಿಗೆ ತಲುಪುವಂತೆ ಟಿವಿ, ರೇಡಿಯೊ, ಮುದ್ರಣ ಮಾಧ್ಯಮಗಳ ಮೂಲಕ ಈ ಕಾಯ್ದೆ ಹಾಗೂ ಅದರ ವಿವರಗಳ ಬಗ್ಗೆ ವಿಸ್ತಾರವಾದ ಪ್ರಚಾರವನ್ನು ಮಾಡಬೇಕು.
12. ಐಪಿಸಿ ಸೆಕ್ಷನ್ 228 (ಎ): ಅತ್ಯಾಚಾರಕ್ಕೊಳಗಾದ ಮಹಿಳೆಯ ಗುರುತನ್ನು ಮುದ್ರಿಸುವ ಅಥವಾ ಪ್ರಕಟಿಸುವ ಯಾವುದೇ ವ್ಯಕ್ತಿಗೆ ಅಥವಾ ಮಾಧ್ಯಮ ಸಂಸ್ಥೆಗೆ, ಭಾರತೀಯ ದಂಡ ಸಂಹಿತೆ (ಐಪಿಸಿ)ಯ ಪ್ರಕಾರ 2 ವರ್ಷ ಕಾರಾಗೃಹ ಶಿಕ್ಷೆ ಮತ್ತು ದಂಡ.